ಓ.ಎಸ್. ನಂಃ **65/2015**
ಡಿ <u>ಡಬ್ಲ್ಯೂಃ **2**</u>

ದಿನಾಂಕಃ 22-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿಯ ಪರ ಶ್ರೀ ಜಿ ಬಿ ಎನ್ ವಕೀಲರಿಂದಃ</u>

ನನಗೆ ಕನ್ನಡ ಹಾಗೂ ಇಂಗ್ಲೀಷ್ ಓದಲು-ಬರೆಯಲು ಬರುವುದಿಲ್ಲ ಎಂದರೆ ಸರಿ. ನನಗೆ ಈಗ 45 ವರ್ಷ ವಯಸ್ಸಾಗಿದೆ. ನಾನು ಗಾಜರಕೋಟ ಗ್ರಾಮದವನಾಗಿರುತ್ತೇನೆ. ನಾನು ಸದರಿ ಗ್ರಾಮದವನಾಗಿರುತ್ತೇನೆ ಎಂಬುದನ್ನು ತೋರಿಸಲು ನನ್ನ ಆಧಾರ ಕಾರ್ಡನ್ನು ಹಾಜರು ಮಾಡಿಲ್ಲ ಎಂದರೆ ಸರಿ. ವಾದಿ ಗಾಜರಕೋಟ ಗ್ರಾಮದವರಾಗಿರುತ್ತಾರೆ ಎಂದರೆ ಸರಿ. 1 ರಿಂದ 7 ನೇ ಪ್ರತಿವಾದಿಯರು ಸಹ ಗಾಜರಕೋಟ ಗ್ರಾಮದವರಾಗಿರುತ್ತಾರೆ ಎಂದರೆ ಸರಿ. 8 ರಿಂದ 11 ನೇ ಪ್ರತಿವಾದಿಯರು ದುರ್ಗಪ್ಪನ ಮಕ್ಕಳಾಗಿರುತ್ತಾರೆ ಎಂದರೆ ಸರಿ. 12 ನೇ ಪ್ರತಿವಾದಿ ರಾಂಪೂರ ಗ್ರಾಮದವರಾಗಿರುತ್ತಾರೆ. ನಾನು ಸಹ ರಾಂಪೂರ ಗ್ರಾಮದವನಾಗಿದ್ದು, ಪ್ರಮಾಣ ಪತರದಲ್ಲಿ ನನ್ನ ಊರು ಗಾಜರಕೋಟ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 13 ನೇ ಪ್ರತಿವಾದಿ ಯಾವ ಊರಿನವರಾಗಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

2. ನನಗೆ ವಾದಿ ಹಾಗೂ 1 ರಿಂದ 11 ನೆ ಪ್ರತಿವಾದಿಯರ ಕುಟುಂಬದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಚಂದಪ್ಪ ಹಾಗೂ ಬೀಮಪ್ಪ ಅಣ್ಣ-ತಮ್ಮಂದಿರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಭೀಮಪ್ಪನಿಗೆ ದುರ್ಗಪ್ಪ ಎಂಬ ಮಗ ಇದ್ದನು ಎಂದರೆ ನನಗೆ ಗೊತ್ತಿಲ್ಲ. ವಾದಿ ಸಾಬಣ್ಣ ಸದರಿ ದುರ್ಗಪ್ಪನ ಮಗ ಆಗಿರುತ್ತಾನೆ ಎಂದರೆ ಸರಿ. ಚಂದಪ್ಪನ ಮಗನ ಹೆಸರು ಸಾಬಣ್ಣ ಎಂದು ಇತ್ತು ಎಂದರೆ ಸರಿ. ಸದರಿ ಸಾಬಣ್ಣನಿಗೆ ರಾಮಣ್ಣ ಹಾಗೂ ಆಶಪ್ಪ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಸದರಿ ರಾಮಣ್ಣ ರವರ ಮಗಳಾಗಿರುತ್ತಾಳೆ ಎಂದರೆ ಸರಿ. 2 ನೇ ಪ್ರತಿವಾದಿ ಸದರಿ ಆಶಪ್ಪನ ಹೆಂಡತಿ ಆಗಿರುತ್ತಾರೆ ಎಂದರೆ ಸರಿ. 3 ರಿಂದ 7 ನೇ ಪ್ರತಿವಾದಿಯರು 2 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ ಎಂದರೆ ಸರಿ.

3. ವಾದಿ ಪಾಲು ವಿಭಾಗಕ್ಕಾಗಿ ದಾವೆ ದಾಖಲಿಸಿರುವುದು ನಿಮಗೆ ಗೊತ್ತಿತ್ತು ಎಂದರೆ ಸಾಕ್ಷಿ ಮೊದಲು ಸರಿ ಎಂದು ನುಡಿದು ಆ ನಂತರ ಗೊತ್ತಿರಲಿಲ್ಲ ಎಂದು

ನುಡಿಯುತ್ತಾರೆ. 12 ನೇ ಪ್ರತಿವಾದಿ ನನ್ನ ಸಂಬಂಧಿಕನಾಗಿರುವುದಿಲ್ಲ. ವಾದಿ ನನ್ನ ದೂರದ ಸಂಬಂಧಿ ಆಗಿರುತ್ತಾನೆ. ನಾನು ಹಾಗೂ 12 ನೇ ಪ್ರತಿವಾದಿ ಆತ್ಮಿಯರಾಗಿರುತ್ತೇವೆ ಎಂದರೆ ಸರಿ. ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದಿಸಿರುವ 03 ಎಕರೆ 10 ಗುಂಟೆ ಯಾವ ಸರ್ವೆ ನಂಬರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಸರ್ವೆ ನಂ.63 ರಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.63 ರಲ್ಲಿ ಎಷ್ಟು ಹಿಸ್ಸೆಗಳು ಇದ್ದಾವೆ ಎಂದು ನನಗೆ ಗೊತ್ತಿಲ್ಲ. ನಾನು ಪ್ರಮಾಣ ಪತ್ರದಲ್ಲಿ ಸರ್ವೆ ನಂಬರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.

4. ದಾವಾ ಜಮೀನು ಸರ್ವೆ ನಂ.63/ಅ ರಲ್ಲಿ 02 ಎರಕೆ 17 ಗುಂಟೆ ಹಾಗೂ ಸರ್ವೆ ನಂ.6/ಆ ರಲ್ಲಿ 32 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಅವರು 02 ಎರಕೆ ಮಾರಾಟ ಮಾಡಿದ್ದು, ಸುಮಾರು 01 ಎಕರೆ 10 ಗುಂಟೆ ಉಳಿದಿರುತ್ತದೆ ಎಂದು ನುಡಿಯುತ್ತಾರೆ. 1963-64 ರಲ್ಲಿ ಸರ್ವೆ ನಂ.63/ಆ ರಲ್ಲಿನ 32 ಗುಂಟೆ ಜಮೀನು ವಾದಿಯ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ವಾದಿಯ ತಂದೆ ತೀರಿಕೊಂಡ ನಂತರ 1988-89 ರಲ್ಲಿ ವಾದಿ ಹೆಸರಿಗೆ ಖಾತಾ ವರ್ಗಾವಣೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ನಂತರ 1998-99 ರಲ್ಲಿ 2 ನೇ ಪ್ರತಿವಾದಿಯ ಗಂಡ ವಾದಿಗೆ ಗೊತ್ತಿಲ್ಲದೇ ಸದರಿ ಜಮೀನು ಖಾತೆಯನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದನು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಎಲ್ಲಾ ಮಾಹಿತಿ ಇದ್ದರೂ ಸಹ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆ ನಂತರ 2 ನೇ ಪ್ರತಿವಾದಿ ಕಾನೂನು ಬಾಹೀರವಾಗಿ ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು 2 ನೇ ಪ್ರತಿವಾದಿಗೆ ಸೇರಿರುತ್ತದೆ ಎಂದು ನುಡಿಯುತ್ತಾರೆ. ಖಾತಾ ವರ್ಗಾವಣೆ ವಿಷಯ ಗೊತ್ತಾದ ನಂತರ ವಾದಿ ಈ ದಾವೆ ದಾಖಲು ಮಾಡಿದ್ದಾರೆ ಎಂದರೆ ಸಾಕ್ಷಿಯು ವಾದಿಯ ಕುಟುಂಬ ಹಾಗೂ 1 ರಿಂದ 7 ನೇ ಪ್ರತಿವಾದಿಯ ಕುಟುಂಬ ಬೇರೆ ಬೇರೆಯಾಗಿರುತ್ತವೆ ಎಂದು ನುಡಿಯುತ್ತಾರೆ. ವಾದಿಗೆ ಪಾಲು ಹೋಗಬಾರದೆಂಬ ಉದ್ದೇಶದಿಂದ ನಂತರ 2 ನೇ ಪ್ರತಿವಾದಿ 12 ನೇ ಪ್ರತಿವಾದಿಗೆ ಖೊಟ್ಟಿ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ವಾದಿ ಈ ದಾವೆ ದಾಖಲು ಮಾಡಿರುವ ವಿಷಯ ನನಗೆ ಈಗ 06 ತಿಂಗಳು-01 ವರ್ಷದ ಹಿಂದೆ ಗೊತ್ತಾಗಿರುತ್ತದೆ. ಖರೀದಿ ಪತ್ರದ ಸಮಯದಲ್ಲಿ 2, 4 ಹಾಗೂ 6 ನೇ ಪ್ರತಿವಾದಿಯರು ಮತ್ತು ಅವರ ಕುಟುಂಬದವರು ಹಾಜರಿದ್ದರು. 2 ನೇ ಪ್ರತಿವಾದಿ 03

ಎಕರೆ ಚಿಲ್ಲರೆ ಗುಂಟೆ ಜಮೀನನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ನನಗೆ ಸದರಿ ಜಮೀನಿನ ಸರ್ವೆ ನಂಬರು ಗೊತ್ತಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಗೆ ಅವರ ಗಂಡನನಿಗೆ ಆಸ್ತಿ ಬಂದಿತ್ತು. 12 ನೇ ಪ್ರತಿವಾದಿ ಖರೀದಿಸಿದ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ರೂ.4 ಲಕ್ಷ ಚಿಲ್ಲರೆ ಮೊತ್ತಕ್ಕೆ 12 ನೇ ಪ್ರತಿವಾದಿ ಜಮೀನು ಖರೀದಿ ಮಾಡಿರುತ್ತಾನೆ. 2 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡುವ ಅಧಿಕಾರ ಇಲ್ಲದಿದ್ದರೂ 12 ನೇ ಪ್ರತಿವಾದಿ ಸುಳ್ಳು ಖರೀದಿ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ ಹಾಗೂ 1 ರಿಂದ 11 ನೇ ಪ್ರತಿವಾದಿಯರ ಜಂಟಿ ಕುಟುಂಬದ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ವಾದಿಗೆ ಪಾಲು ಸಿಗಬಾರದು ಎಂಬ ಉದ್ದೇಶದಿಂದ 2 ನೇ ಹಾಗೂ 12 ನೇ ಪ್ರತಿವಾದಿಯರು ಈ ದಾವೆ ನಡೆಯುತ್ತಿರುವ ವಿಷಯ ಗೊತ್ತಿದ್ದರೂ ಸುಳ್ಳು ಖರೀದಿ ಪತ್ರ ತಯಾರಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರ ವಾದಿಯ ಮೇಲೆ ಬಂದನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳಿಗೆ ಸಂಬಂಧಿಸಿದಂತೆ ವಾದಿ ಹಾಗೂ 1 ರಿಂದ 11 ನೇ ಪ್ರತಿವಾದಿಯರ ನಡುವೆ ಈವರೆಗೆ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ವಾದಿಗೆ ಪಾಲು ಇರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ